# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC 232/2025**

**PW1**

| | | |
|---|---|---|
| ಸಾಕ್ಷಿಯ ಹೆಸರು | ಃ | ಬಸವರಾಜ್ ಕೊರೆಗಾರ್ |
| ತಂದೆ ಹೆಸರು | ಃ | ದಿ. ಮೂರ್ತಿ |
| ಪ್ರಾಯ | ಃ | 29 ವರ್ಷ |
| ಉದ್ಯೋಗ | ಃ | ಕೆಲಸ ಇರುವುದಿಲ್ಲ |
| ವಾಸ | ಃ | ಹಾವೇರಿ |

ದಿನಾಂಕ **: 17.01.2026** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಅರ್ಜಿದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಅರ್ಜಿದಾರ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 1 ಎಂದು, ದೂರಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ನಿಪಿ - 2 ಎಂದು, ಸ್ಥಳ ಮಹಜರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 3 ಎಂದು, ಕಚ್ಚಾ ನಕ್ಷೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 4 ಎಂದು, ಸ್ವತ್ತು ಸ್ವಾಧೀನತಾ ಮಹಜರಿನ ದೃಢೀಕೃತ ನಕಲನ್ನು ನಿಪಿ - 5 ಎಂದು, ಐಎಮ್‌ವಿ ವರದಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 6 ಎಂದು, ಕಲಂ 160 ರ ನೋಟೀಸಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 7 ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 8 ಎಂದು, ಶವ ಪರೀಕ್ಷಾ ವರದಿಯನ್ನು ನಿಪಿ - 9 ಎಂದು, ಶವ ತನಿಖಾ ವರದಿಯನ್ನು ನಿಪಿ - 10 ಎಂದು, ಮೂರು ಆಧಾರ್ ಕಾರ್ಡಗಳನ್ನು ಮತ್ತು ಅದರ ನೋಟರೀಕೃತ ನಕಲುಗಳನ್ನು ಹಾಜರುಪಡಿಸಿದ್ದೇನೆ. (ನೋಟರೀಕೃತ ನಕಲನ್ನು ಮೂಲಪ್ರತಿಯೊಂದಿಗೆ ಹೋಲಿಸಿ ನೋಡಿದ ನಂತರ ಮೂಲಪ್ರತಿಯನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು). ಆಧಾರ್ ಕಾರ್ಡಿನ ನೋಟರೀಕೃತ ನಕಲುಗಳನ್ನು ಕ್ರಮವಾಗಿ ನಿಪಿ - 11 ರಿಂದ ನಿಪಿ - 13 ಎಂದು, ಪೋಲೀಸರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 14 ಎಂದು, ಸದರಿ ವಾಹನದ ಮಾಲೀಕರಿಗೆ ಪೋಲೀಸರು ಕಲಂ 133 ರಡಿಯಲ್ಲಿ ನೀಡಿದ ನೋಟೀಸಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 15

ಎಂದು, ಸದರಿ ನೋಟೀಸಿಗೆ ನೀಡಿರುವ ಪ್ರತ್ಯುತ್ತರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ನಿಪಿ - 16 ಎಂದು, ಡಿಸ್ ಚಾರ್ಜ್ ಸಮ್ಮರಿಯನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ - 17 ಎಂದು, ಒಳರೋಗಿ ಬಿಲ್ಲು ಮತ್ತು ರಶೀದಿಗಳನನ್ನು ಹಾಗೂ 7 ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ - 18 ಎಂದು, ಮರಣ ಪ್ರಮಾಣ ಪತ್ರದ ನೋಟರೀಕೃತ ನಕಲನ್ನು ನಿಪಿ - 19 ಎಂದು (ಮೂಲ ಪ್ರತಿಯನ್ನು ಪರಿಶೀಲಿಸಿ ಹಿಂತಿರುಗಿಸಲಾಯಿತು), ಮೃತರ ಆಧಾರ್ ಕಾರ್ಡ್ ನ ನೋಟರೀಕೃತ ಪ್ರತಿಯನ್ನು ನಿಪಿ - 20 ಎಂದು, (ಮೂಲ ಪ್ರತಿಯನ್ನು ಪರಿಶೀಲಿಸಿ ಹಿಂತಿರುಗಿಸಲಾಯಿತು) ಗುರುತಿಸಲಾಯಿತು.ಆದ್ದರಿಂದ ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

<u>ಪಾಟೀ ಸವಾಲುಃ</u> ಶ್ರೀಮತಿ ಎನ್.ಬಿ.ಎಸ್., 2 ನೇ ಎದುರುದಾರರ ಪರ ವಕೀಲರಿಂದಃ

ನಾನು ಕೆನವಳ್ಳಿ, ಕೆಂಚನಗಡುವು, ಹಾನಗಲ್ ತಾಲೂಕಿನಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನನಗೆ ಪವನ್ ಖಾನಾವಳ್ಳಿಯವರ ಪರಿಚಯವಿರುವುದಿಲ್ಲ. ಅವರು ನಮ್ಮ ಊರಿನವರು ಎಂದರೆ ಕೆನವಳ್ಳಿಯವರೇ ಆಗಿರುತ್ತಾರೆ. ಕೆನವಳ್ಳಿ ಎಂದರೆ ಒಂದು ಸಣ್ಣ ಪ್ರದೇಶವಾಗಿರುತ್ತದೆ. ಅಲ್ಲಿ

ವೀರಪ್ಪ ಎನ್ನುವವರ ಪರಿಚಯವಿರುವುದಿಲ್ಲ. ನಾನು ಮತ್ತು ನನ್ನ ಅಣ್ಣ, ಪವನ್ ಖಾನಾವಳ್ಳಿ ಯವರು ಎಲ್ಲರೂ ಪರಿಚಿತರಾದ ಕಾರಣ, ನನ್ನ ಸಹೋದರ ಅಪಘಾತದಲ್ಲಿ ಮರಣ ಹೊಂದದಿದ್ದರೂ ಸಹಾ ಪರಿಹಾರ ಪಡೆಯುವ ಉದ್ದೇಶದಿಂದ ನಾವುಗಳು ಒಳಸಂಚನ್ನು ಮಾಡಿ, ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ನಾವುಗಳು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ನನಗೆ ಆರೋಗ್ಯ ಸರಿ ಇರುವುದಿಲ್ಲ. ನನಗೆ ಆರೋಗ್ಯ ಸರಿ ಇರುವುದಿಲ್ಲ ಎಂದು ದಾಖಲೆಯನ್ನು ಹಾಜರುಪಡಿಸಬಹುದು. ನನ್ನ ತಾಯಿ ನನ್ನ ಜೊತೆ ವಾಸವಾಗಿದ್ದಾರೆ. ನನ್ನ ಸಹೋದರಿಗೆ ಮದುವೆಯಾಗಿರುತ್ತದೆ. ಅವರು ಗಂಡನ ಮನೆಯಲ್ಲಿ ವಾಸವಾಗಿದ್ದಾರೆ. ನನ್ನ ತಾಯಿ ಯಾವುದೇ ಕೆಲಸ ಮಾಡುತ್ತಿಲ್ಲ. ನನ್ನ ತಾಯಿಗೂ ಸಹಾ ಆರೋಗ್ಯ ಸರಿ ಇರುವುದಿಲ್ಲ. ಅದರ ಬಗ್ಗೆ ದಾಖಲೆ ಹಾಜರುಪಡಿಸಬಹುದು.

ನನ್ನ ಮೃತ ಸಹೋದರ ಉಡುಪಿ ಕಡೆ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ಸಹೋದರ ಏನು ಕೆಲಸ ಮಾಡುತ್ತಿದ್ದರು ಮತ್ತು ಅವರಿಗೆ ಎಷ್ಟು ಆದಾಯ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಬಹುದು.

ನನ್ನ ಸಹೋದರ ಅಪಘಾತದಿಂದ ಮೃತಪಟ್ಟಿರುತ್ತಾರೆ. ಅವರಿಗೆ ಹೇಗೆ ಅಪಘಾತವಾಗಿದೆ ಎಂದು ನನಗೆ ತಿಳಿದಿಲ್ಲ. ನನ್ನ ಸಹೋದರನನ್ನು ಹೆಬ್ರಿಯ ಅಶೋಕ್ ಪ್ರಭು ಎನ್ನುವವರು ಆಸ್ಪತ್ರೆಗೆ ಸೇರಿಸಿರುತ್ತಾರೆ. ಅವರ ಪರಿಚಯ ನನಗೆ ಇರಲಿಲ್ಲ. ನನ್ನ ಸಹೋದರನಿಗೆ ಅವರ ಪರಿಚಯ ಇತ್ತೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ನನ್ನ ಸಹೋದರ ಉಡುಪಿಯಲ್ಲಿ ಕೆಲಸ ಮಾಡುತ್ತಿದ್ದು, ಹೆಬ್ರಿಗೆ ಬರುತ್ತಿದ್ದ ವಿಚಾರ ನನಗೆ ತಿಳಿಸಿರುವುದಿಲ್ಲ. ಅಪಘಾತ ಆಗದೇ ಇದ್ದರೂ ಸಹಾ ಹಾಗೂ ನನ್ನ ಸಹೋದರ ಅಪಘಾತದಲ್ಲಿ ಮೃತಪಡದೇ ಇದ್ದರೂ ಸಹಾ, ನಾನು ಪರಿಹಾರ ಪಡೆಯುವ ಉದ್ದೇಶದಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ಅಥವಾ ಇತರೆ ಅರ್ಜಿದಾರರಾಗಲೀ ನನ್ನ ಸಹೋದರನ ಆದಾಯವನ್ನು ಅವಲಂಬಿಸದೆ ಇದ್ದರೂ ಸಹಾ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗೂ, ನನ್ನ ಸಹೋದರನ ಮರಣಕ್ಕೂ ಸಂಬಂಧ ಇರದೇ ಇದ್ದರೂ ಪರಿಹಾರ ಪಡೆಯುವ ಉದ್ದೇಶದಿದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾಗಿದೆಯೋ ಇಲ್ಲವೋ ಎಂದು ನಾನು ಖುದ್ದು ತಿಳಿದುಕೊಂಡಿರುವುದಿಲ್ಲ.

ನನ್ನ ಸಹೋದರ ಉಸಿರಾಟದ ತೊಂದರೆಯಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅಜಾಕರೂಕತೆಯಿಂದ ಅವರಿಗೆ

ಸರಿಯಾಗಿ ಆಹಾರ ನೀಡದೇ ಅವರು ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಹೋದರನಿಗೆ ಆದಾಯ ಇಲ್ಲದೇ ಇದ್ದರೂ ಸಹಾ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.